

## ಹಾಲೆಂಡ್ ಮಾದರಿ

ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡುವ ದೇಶಗಳಲ್ಲಿ ಹಾಲೆಂಡ್‌ನ ಮಾದರಿ ಉತ್ತಮವಾದದ್ದು ಎಂದು ಪರಿಗಣಿಸಲಾಗುತ್ತದೆ. ನಾಲ್ಕನೇ ವರ್ಷದಿಂದಲೇ ಪ್ರಾರಂಭವಾಗುವ ಕಡ್ಡಾಯ ಲೈಂಗಿಕ ಶಿಕ್ಷಣ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಮುಂದುವರೆಯುತ್ತದೆ. ಲೈಂಗಿಕ ಕ್ರಿಯೆಯ ವಿವರಣೆಗಿಂತ ಹೆಚ್ಚಾಗಿ ಪರಸ್ಪರರನ್ನು ಗೌರವಿಸುವುದು, ಒತ್ತಾಯ ಒತ್ತಡಗಳನ್ನು ಹೇರದಿರುವುದು ಮತ್ತು ತಿರಸ್ಕರಿಸುವುದು, ಹದಿವಯಸ್ಸಿನ ಕಾಮನೆಗಳನ್ನು ನಿಭಾಯಿಸುವುದು, ಪ್ರೀತಿಯನ್ನು ಕಾಮದ ತಳಹದಿಯಾಗಿಸುವುದು ಹಾಗೂ ಇನ್ನಿತರ ಪ್ರಮುಖ ಅಂಶಗಳನ್ನು ಅಲ್ಲಿ ಕಲಿಸಲಾಗುತ್ತದೆ. ಹಾಗಾಗಿ ಹದಿವಯಸ್ಸಿನವರ ಗರ್ಭಧಾರಣೆ, ಲೈಂಗಿಕ ರೋಗಗಳು ಮುಂತಾದ ಸಾಕಷ್ಟು ಮಾಪಕಗಳಲ್ಲಿ ಹಾಲೆಂಡ್ ಇತರ ದೇಶಗಳಿಗಿಂತ ಉತ್ತಮವಾಗಿದೆ ಎನ್ನಲಾತ್ತಿದೆ.



ಹೋದಾಗ ಅವಳ ಭಯ ಹಿಂದೆ ಸರಿದಿತ್ತು.

2. ಅವಳು ಸುಮಾರು ಹನ್ನೊಂದು ವರ್ಷದ ಬಾಲಕಿ. ಕುಮಾರಿ ಎಂದು ಕರೆಯೋಣ. ದೇಹ ಕಿಶೋರಾವಸ್ಥೆಗೆ ಕಾಲಿಡುತ್ತಿರುವುದರ ಸೂಚನೆಗಳು ಕಾಣುತ್ತಿದ್ದರೂ ಅದರ ಅರಿವಿಲ್ಲದ ಮುಗ್ಧತೆ ಅವಳ ಮುಖದಲ್ಲಿ ಲಾಸ್ಯವಾಡುತ್ತಿತ್ತು. ಕುಮಾರಿಯ ತಾಯಿಗೆ ಇದ್ದ ಇಬ್ಬರು ಹೆಣ್ಣು ಮಕ್ಕಳಲ್ಲಿ ಇವಳೇ ದೊಡ್ಡವಳು. ತಂದೆ ತಾಯಂದಿರ ನಡುವೆ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದು ಸಧ್ಯಕ್ಕೆ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು. ಆಗಾಗ ಮನೆಗೆ ಬರುತ್ತಿದ್ದ ಹತ್ತಿರದ ಸಂಬಂಧಿಯೊಬ್ಬರು ಕುಮಾರಿಯ ದೇಹವನ್ನು ಲೈಂಗಿಕ ಉದ್ದೇಶದಿಂದ ಸ್ಪರ್ಶಿಸುತ್ತಿರುವುದು ತಾಯಿಯ ಗಮನಕ್ಕೆ ಬಂದಿತ್ತು. ಇದರ ವಿರುದ್ಧ ಕುಮಾರಿಯ ತಾಯಿ ಪ್ರತಿಭಟಿಸಿದ್ದರು. ಆದರೆ ಮಗಳ ಜೊತೆ ಇದರ ಬಗೆಗೆ ಮಾತನಾಡುವುದು ಹೇಗೆ ಮತ್ತು ಮಗಳ ತನ್ನನ್ನು ರಕ್ಷಿಸಿಕೊಳ್ಳುವುದನ್ನು ಕಲಿಸುವುದು ಹೇಗೆ ಎಂದು ಗೊತ್ತಿರಲಿಲ್ಲ. ಆ ಕಾರಣಕ್ಕೆ ನನ್ನ ಸಹಾಯ ಕೇಳಿದ್ದರು.

ಹೀಗೆ ಸಹಾಯ ಕೇಳುವ ತಾಯಂದಿರು ನಮ್ಮಲ್ಲಿ ಎಷ್ಟು ಜನರಿದ್ದಾರೆ? ಕುಟುಂಬದ ಸದಸ್ಯರಿಂದ ನಡೆದಿರಬಹುದಾದ ಲೈಂಗಿಕ ಶೋಷಣೆಯನ್ನು ಮಾನ– ಅವಮಾನಗಳ ಮುಸುಕನ್ನು ಎಳೆದುಕೊಂಡು ಚಾಪೆಯ ಕೆಳಗೆ ತೂರಿಸಿದರೆ ಮಕ್ಕಳನ್ನು ಶೋಷಕರಿಂದ ರಕ್ಷಿಸುವುದು ಸಾಧ್ಯವೇ? ಮುಂದೊಮ್ಮೆ ಇಂತಹ ಸಂದರ್ಭಗಳು ಎದುರಾದಾಗ ಏನು, ಏಕೆ ಮತ್ತು ಹೇಗೆ ಮಾಡಬೇಕೆಂಬುದನ್ನು ಮಕ್ಕಳಿಗೆ ತಿಳಿಸುವವರು ಯಾರು?

3. ವೃತ್ತಿಯ ಸಹೋದ್ಯೋಗಿಯೊಬ್ಬರು ಹೇಳಿದ ಘಟನೆ ಇದು. ಎಂಟು ವರ್ಷದ ಹೆಣ್ಣು ಮಗುವೊಂದು ಮೊಬೈಲ್‌ನಲ್ಲಿ ಆಟವಾಡುತ್ತಿದ್ದಾಗ ಯಾವುದೋ ಅಶ್ಲೀಲ ಜಾಲತಾಣವೊಂದರ ಜಾಹೀರಾತು, ಪರದೆಯ ಮೂಲೆಯಲ್ಲಿ ಕಾಣಿಸಿಕೊಂಡಿದೆ. ಕುತೂಹಲದಿಂದ ಅದನ್ನು ಒತ್ತಿದಾಗ ನೀಲಿಚಿತ್ರಗಳು ತೆರೆದುಕೊಂಡಿವೆ. ಏನನ್ನೂ ಅರಿಯದ ಮುಗ್ಧ ಮಗು ಸುಮ್ಮನೆ ಅದನ್ನು ನೋಡುತ್ತಿರುವುದು ತಾಯಿಯ ಗಮನಕ್ಕೆ ಬಂತು. ತಕ್ಷಣ ಅವರು ಭೂಮಿ ಆಕಾಶ ಒಂದಾಗುವಂತೆ ಮಗುವಿನ ಮೇಲೆ ಎಗರಿ ಬಿದ್ದಿದ್ದಾರೆ. ಪೂರ್ಣ ಗೊಂದಲಕ್ಕೊಳಗಾಗಿರುವ ಮಗು ನಂತರ ತಂದೆಯ ಬಳಿ ಹೋಗಲು ಕೂಡ ಹೆದರಿಕೊಳ್ಳುತ್ತಿದೆ.

ಇಂತಹ ಸಂದರ್ಭಗಳನ್ನು ಹೇಗೆ ನಿಭಾಯಿಸಬೇಕೆಂದು ಅರಿವಿಲ್ಲದ ಪೋಷಕರು ತಮ್ಮತಮ್ಮಲ್ಲೇ ಕಚ್ಚಾಡುತ್ತಿದ್ದರೇ ಹೊರತು ತಜ್ಞರ ಸಹಾಯ ಕೇಳುವುದಕ್ಕೆ ಹಿಂಜರಿಯುತ್ತಿದ್ದರು. ಲೈಂಗಿಕತೆಯ ಬಗೆಗೆ ಮಗುವಿನ ಮನಸ್ಸಿನಲ್ಲಿ ಮೂಡಿಸುವ ಭಯ,